# ಅನುಬಂಧ ಭಾಗ

## ಪುಸ್ತಕದ ಕಡೆಗೆ ಒಂದು ವೇಗವಾದ ನೋಟ

I. ಸೂಚಕ ಕಾರ್ಯಗಳ ಪುಸ್ತಕ, 1-12
II. ಮಹಿಮೆಯ ಪುಸ್ತಕ, 13-21
ಇಲ್ಲವೇ
I. ಸೂಚಕ ಕಾರ್ಯಗಳ ಪುಸ್ತಕ, 1-12
II. ಸೂಚಕ ಕಾರ್ಯದ ಪುಸ್ತಕ, 13-21
(ಶಿಲುಬೆ ಮತ್ತು ಪುನರುತ್ಥಾನ)

## ಯೋಹಾನನ ಸಂಕ್ಷಿಪ್ತ ಮುಖ್ಯ ಅಂಶಗಳು

I. ಪೀಠಿಕೆ (1:1-18)
II. ಯೇಸುವಿನ ಸೇವೆಯ ಪ್ರಾರಂಭಗಳು (1:19-51)
III. ಕ್ರಿಸ್ತನ ಸೂಚಕ ಕಾರ್ಯಗಳು ಮತ್ತು ಸಂಭಾಷಣೆಗಳು (2:1-12:50)
IV. ಬೀಳ್ಕೊಳ್ಳುವ ಸಂಭಾಷಣೆಗಳು (13:1-17:26)
V. ಶಿಲುಬೆಗೆ ಹಾಕಲ್ಪಟ್ಟಿದ್ದು (18:1-19:42)
VI. ಪುನರುತ್ಥಾನ (20:1-29)
VII. ಸುವಾರ್ತೆಯ ಉದ್ದೇಶ (20:30, 31)
VIII. ಮುಕ್ತಾಯ (21:1-25)[1]

---
ಟಿಪ್ಪಣಿ

[1]Leon Morris, *The Gospel According to John*, The New International Commentary on the New Testament (Grand Rapids, Mich.: Wm. B. Eerdmans Publishing Co., 1971), 65-69.

# ಯೋಹಾನನ್ನು ಸಂದರ್ಶಿಸು

ಅಪೊಸ್ತಲನ ಯೋಹಾನನು[1] ಬೇತ್ಸಾಯಿದದಲ್ಲಿ ಜನಿಸಿದನು (ಯೋಹಾನ 1:44). ತನ್ನ ತಂದೆ ಜೆಬೆದಾಯನನ್ನು ಒಳಗೊಂಡು ನಾಲ್ಕು ಜನರ ಕುಟುಂಬದ ಭಾಗವಾಗಿದ್ದನು (ಲೂಕ 5:10); ಅವನ ತಾಯಿ, ಸಲೋಮೆ; ಮತ್ತು ಅವನ ಸಹೋದರ ಹಾಗೂ ಜೊತೆ ಅಪೊಸ್ತಲ, ಯಾಕೋಬ.

ಜೆಬೆದಾಯನು ಒಬ್ಬ ಬೆಸ್ತನಾಗಿದ್ದನು (ಮತ್ತಾಯ 4:21) ಮತ್ತು ತನ್ನ ಮಕ್ಕಳನ್ನು ಕುಟುಂಬದ ಕಸಬಿನಲ್ಲಿ ಪ್ರಾರಂಭಿಸಿದ್ದನು. ಕುಟುಂಬವು ಸಮೃದ್ಧಿಯುಳ್ಳದ್ದಾಗಿರಬೇಕು ಯಾಕಂದರೆ ಅವರು ಸೇವಕರುಗಳನ್ನು ನೇಮಿಸಿಕೊಂಡಿದ್ದರು (ಮಾರ್ಕ 1:20). ಯೆಹೂದ್ಯರಲ್ಲಿ ಅವರು ಪ್ರಭಾವವುಳ್ಳವರಾಗಿದ್ದರೆಂದು ತೋರುತ್ತದೆ; ಯೋಹಾನನಾದರೂ ಮಹಾಯಾಜಕನಿಗೆ ಪರಿಚಿತಯುಳ್ಳವನಾಗಿದ್ದನು (ಯೋಹಾನ 18:15, 16).

ಯೇಸುವನ್ನು ಹಿಂಬಾಲಿಸಿ, ಆತನಿಗೂ ಆತನ ಶಿಷ್ಯರಿಗೂ "ತಮ್ಮ ಸ್ವಂತ ಆಸ್ತಿಯೊಳಗಿಂದ ಉಪಚಾರ ಮಾಡುತ್ತಿದ್ದ ಸ್ತ್ರೀಯರ ಗುಂಪಿನೊಳಗೆ ಸಲೋಮೆಯು ಒಬ್ಬಳಾಗಿದ್ದಳು" (ಮತ್ತಾಯ 27:56; ಲೂಕ 8:3). ಆಕೆಯು ತನ್ನ ಗಂಡು ಮಕ್ಕಳಿಗಾಗಿ ಮಹತ್ವಾಕಾಂಕ್ಷೆಯುಳ್ಳವಳಾಗಿ ಯೇಸುವಿನ ರಾಜ್ಯದ ಬಗ್ಗೆ ಯೋಗ್ಯ ತಿಳುವಳಿಕೆ ಇಲ್ಲದವಳಾಗಿ ರಾಜ್ಯವು ಸ್ಥಾಪಿಸಲ್ಪಟ್ಟಾಗ ಆತನ ಬಲಗಡೆಯಲ್ಲಿ ಮತ್ತು ಎಡಗಡೆಯಲ್ಲಿ ಅವರು ಕುಳಿತು ಕೊಳ್ಳುವಂತೆ ಮಾಡಬೇಕೆಂದು ಬೇಡಿಕೊಂಡಳು (ಮತ್ತಾಯ 20:20, 21; ಮಾರ್ಕ 10:35-37).

ಯೋಹಾನನು ಮೊದಲು ಸ್ನಾನಿಕನಾದ ಯೋಹಾನನ ಹಿಂಬಾಲಕನಾಗಿದ್ದನು (ಯೋಹಾನ 1:35, 40). ಹೀಗಿದ್ದರೂ ಪ್ರವಾದಿಯ ಬೋಧನೆಯನ್ನು ಕೈಕೊಳ್ಳುವಂತೆ, ಅವನು ಯೇಸುವಿನ ಬಹಿರಂಗ ಸೇವೆಯು ಪ್ರಾರಂಭವಾದಾಗ ಆತನನ್ನು ಹಿಂಬಾಲಿಸಲು ಬಿಟ್ಟು ಬಂದನು. ಯೇಸುವು ಕರೆದ ಮೊದಲಿನ ಇಬ್ಬರು ಶಿಷ್ಯರಲ್ಲಿ ಅವನು ಒಬ್ಬನಾಗಿದ್ದನು (ಮತ್ತಾಯ 4:18-22; ಯೋಹಾನ 1:35-40). ಅವನು ಯೇಸುವಿನ ಆಂತರಿಕ ಗುಂಪಿನ ಭಾಗವಾದನು (ಮಾರ್ಕ 5:37). ಪೇತ್ರ ಮತ್ತು ಯೋಹಾನರೊಂದಿಗೆ - ರೂಪಾಂತರದ ಸಮಯದಲ್ಲಿ ಯೇಸುವಿನೊಂದಿಗೆ ಹೋಗುವ (ಮತ್ತಾಯ 17:1-5; ಲೂಕ 9:28-35) ಮತ್ತು ಗೆತ್ಸೇ ಮನೆಯಲ್ಲಿ ಆತನ ಪ್ರತ್ಯೇಕ ಪ್ರಾರ್ಥನೆಯ ಸಮಯದಲ್ಲಿ ಆತನೊಂದಿಗೆ ಹೋಗುವ (ಮತ್ತಾಯ 26:36, 37) ಅವಕಾಶವನ್ನು ಪಡೆದುಕೊಂಡನು. ಮಾರ್ಕ 13:3-37ರಲ್ಲಿ ದಾಖಲೆಯಾದ ಯೇಸುವಿನ ಮಹಾ ಪ್ರವಾದಿಕ ಭಾಷಣವನ್ನು ಕೇಳಿದ ನಾಲ್ವರಲ್ಲಿ ಒಬ್ಬನಾಗಿದ್ದನು. ಮತ್ತು ಯೇಸುವಿನ ಮರಣಕ್ಕಿಂತ ಮೊದಲು ಪಸ್ಕದ ಊಟವನ್ನು ಸಿದ್ಧಪಡಿಸಲು ಕಳುಹಿಸಲ್ಪಟ್ಟ ಇಬ್ಬರು ಶಿಷ್ಯರಲ್ಲಿ ಒಬ್ಬನಾಗಿದ್ದನು (ಲೂಕ 22:8). ತನ್ನ ಮರಣದ ನಂತರ ತನ್ನ ತಾಯಿಯ ಜೋಪಾಸನೆ ಮಾಡಲು ಯೇಸುವಿನಿಂದ ಕೇಳಲ್ಪಟ್ಟವನು ಅವನಾಗಿದ್ದನು (ಯೋಹಾನ 19:25-27).

ತನ್ನ ಸುವಾರ್ತೆಯ ವೃತ್ತಾಂತದಲ್ಲಿ, ಯೋಹಾನನು ಪುನಃ ಪುನಃ ತನ್ನನ್ನು "ಯೇಸುವು ಪ್ರೀತಿಸಿದ ಶಿಷ್ಯನು" (13:23; 19:26; 20:2; 21:7, 20) ಎಂದು ಹಾಗೂ "ಮತ್ತೊಬ್ಬ ಶಿಷ್ಯನು" (18:15, 16; 20:2; 21:2) ಎಂದು ಉಲ್ಲೇಖಿಸಿದನು. ಬೈಬಲಿನ ಇತರ ಪುಸ್ತಕಗಳಲ್ಲಿ ಯೋಹಾನನ ಹೆಸರು ಮೂವತ್ತೈದು ಸಲ ಕಂಡು ಬರುತ್ತದೆ - ಇತರ ಮೂರು ಸುವಾರ್ತೆಯ ಬರಹಗಾರರ ಹೆಸರುಗಳ ಒಟ್ಟುಗೂಡಿಸುವಿಕೆಯ ಸಂಖ್ಯೆಯ ಎರಡು ಪಟ್ಟು ಇರುತ್ತದೆ.[2]

ಯೋಹಾನನು ಯೇಸುವಿನ ನಂಬಿಗಸ್ತ ಅನುಯಾಯಿಯಾಗಿ ಉಳಿದು ಕೊಂಡನು, ಅನಂತರದಲ್ಲಿ ಸಭೆಯ "ಸ್ಥಂಭಗಳಲ್ಲಿ" ಒಬ್ಬನಾದನು (ಗಲಾತ್ಯ 2:9). ಕ್ರಮೇಣವಾಗಿ,

ಪರಿಶುದ್ಧಾತ್ಮನಿಂದ ಪ್ರೇರೇಪಿಸಲ್ಪಟ್ಟವನಾಗಿ, ಬೈಬಲಿನ ಐದು ಪುಸ್ತಕಗಳನ್ನು ಬರೆದನು; ಯೋಹಾನನ ಸುವಾರ್ತೆ: 1, 2 ಮತ್ತು 3 ಯೋಹಾನ; ಮತ್ತು ಪ್ರಕಟಣೆ, ಕುದಿಯುವ ಎಣ್ಣೆಯಲ್ಲಿ ಹಾಕಲ್ಪಟ್ಟ ರೋಮಿನಲ್ಲಿ ಹತಸಾಕ್ಷಿ ಮರಣ ಹೊಂದಿದನೆಂದು ಹೇಳಲ್ಪಟ್ಟಿದೆ.

---

ಟಿಪ್ಪಣಿಗಳು

[1]Information based on Robert G. Gromacki, *New Testament Survey* (Grand Rapids, Mich.: Baker Book House, 1974), 130-31, and W. Graham Scroggie, *A Guide to the Gospels* (Old Tappan, N.J.: Fleming H. Revell Co., 1962), 398. [1]ಬೈಬಲಿನ ಮತ್ತಾಯನ ಹೆಸರು ಎಂಟು ಸಲ, ಮಾರ್ಕನ ಹೆಸರು ಎಂಟು ಸಲ ಮತ್ತು ಲೂಕನ ಹೆಸರು ಮೂರು ಸಲ ಬರುತ್ತದೆ. (Gromacki, 131.)

## ಯೇಸುವಿನ ದೊಡ್ಡ ಪ್ರಸಂಗಗಳು ಮತ್ತು ಸಂಭಾಷಣೆಗಳು

| | |
|---|---|
| ನೂತನ ಜನನ | 3:1-13 |
| ಜೀವಜಲ | 4:6-29 |
| ತನ್ನ ದೈವತ್ವದ ಪ್ರತಿಪಾದನೆ | 5:19-47 |
| ಜೀವಕರವಾದ ರೊಟ್ಟಿ | 6:22-71 |
| ಲೋಕಕ್ಕೆ ಬೆಳಕು | 8:12-59 |
| ಒಳ್ಳೆ ಕುರುಬನು | 10:1-30 |
| ಮೇಲಿನ ಕೋಣೆಯ ಸಂಭಾಷಣೆ | 13:1-16:33 |
| ಕ್ರಿಸ್ತನ ಪ್ರಾರ್ಥನೆ | 17:1-26 |

## ಯೆರೂಸಲೇಮಿಗೆ ಯೇಸುವಿನ ಸಂದರ್ಶನಗಳು

| | | |
|---|---|---|
| 1. | ಮೊದಲನೆಯ ಪಸ್ಕ ಹಬ್ಬ | 2:23 |
| 2. | ಹೆಸರಿಲ್ಲದ ಹಬ್ಬ | 5:1 |
| 3. | ಪರ್ಣ ಶಾಲೆಗಳ ಹಬ್ಬ (ಬಿಡಾರದ ಹಬ್ಬ) | 7:2, 10 |
| 4. | ದೇವಾಲಯದ ಪ್ರತಿಷ್ಠೆಯ ಹಬ್ಬ | 10:22 |
| 5. | ಕೊನೆಯ ಪಸ್ಕ ಹಬ್ಬ | 13:1 |

*A Guide to the Gospels*
W. Graham Scroggie

# ಯೋಹಾನನ ಸುವಾರ್ತೆಯಿಂದ ಕಂಠಪಾಠ ಮಾಡಲು ಇಪ್ಪತ್ತು ಪ್ರಮುಖ ವಚನಗಳು

ಯೋಹಾನ 1:1
ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿ ಇತ್ತು, ಆ ವಾಕ್ಯವು ದೇವರಾಗಿತ್ತು.

ಯೋಹಾನ 3:7
" 'ನೀವು ಹೊಸದಾಗಿ ಹುಟ್ಟಬೇಕು' ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ."

ಯೋಹಾನ 3:16
"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯ ಬೇಕೆಂದು ಆತನನ್ನು ಕೊಟ್ಟನು."

ಯೋಹಾನ 4:24
"ದೇವರು ಆತ್ಮ ಸ್ವರೂಪನು, ಆತನನ್ನು ಆರಾಧಿಸುವವರು ಆತ್ಮಿಯ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು."

ಯೋಹಾನ 6:35
ಯೇಸು ಅವರಿಗೆ, "ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ. ನನ್ನನ್ನು ನಂಬುವನಿಗೆ ಎಂದಿಗೂ ನೀರಡಿಕೆ ಯಾಗುವದಿಲ್ಲ" ಎಂದು ಹೇಳಿದನು.

ಯೋಹಾನ 8:12
ಯೇಸು ತಿರಿಗಿ ಅವರ ಸಂಗಡ ಮಾತಾಡಲಾರಂಭಿಸಿ, "ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ, ಜೀವಕೊಡುವ ಬೆಳಕನ್ನು ಹೊಂದಿದ ವನಾಗಿರುವನು" ಎಂದು ಹೇಳಿದನು.

ಯೋಹಾನ 8:32
"ಸತ್ಯವನ್ನು ತಿಳಿದು ಕೊಳ್ಳುವಿರಿ, ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು".

ಯೋಹಾನ 10:7
ಆದ ಕಾರಣ ಯೇಸು ಮತ್ತು ಅವರಿಗೆ, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಕುರಿಗಳಿಗೆ ನಾನೇ ಬಾಗಲಾಗಿದ್ದೇನೆ." ಎಂದು ಹೇಳಿದನು.

ಯೋಹಾನ 10:11
"ನಾನೇ ಒಳ್ಳೇ ಕುರುಬನು; ಒಳ್ಳೆ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ."

ಯೋಹಾನ 11:25
ಯೇಸು ಆಕೆಗೆ, "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು" ಎಂದು ಹೇಳಿದನು.

ಯೋಹಾನ 11:35
ಯೇಸು ಕಣ್ಣೀರು ಬಿಟ್ಟನು.

ಯೋಹಾನ 13:34, 35
"ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ, ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇಲೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸ ಬೇಕು ಎಂಬುದೇ ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ಶಿಷ್ಯರು ಎಂದು ತಿಳುಕೊಳ್ಳುವರು."


ಯೋಹಾನ 14:6
ಯೇಸು ಅವನಿಗೆ, "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" ಎಂದು ಹೇಳಿದನು.

ಯೋಹಾನ 15:1
"ನಾನೇ ನಿಜವಾದ ದ್ರಾಕ್ಷೇ ಬಳ್ಳಿ. ನನ್ನ ತಂದೆ ತೋಟಗಾರನು."


ಯೋಹಾನ 15:13
"ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ."

ಯೋಹನ 17:20, 21
"ಆದರೆ ಇವರಿಗೋಸ್ಕರ ಮಾತ್ರವಲ್ಲದೇ ಇವರ ವಾಕ್ಯದಿಂದ ನನ್ನನ್ನು ನಂಬುವವರಿ ಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿ ಕೊಟ್ಟಿದ್ದೀ. ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ."

ಯೋಹಾನ 20:30, 31
ಯೇಸು ಇನ್ನೂ ಬೇರೆ ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ.




**ಯೇರೂಸಲೇಮಿನ ದೇವಾಲಯದ ಚಿತ್ರ**


ಯೇಸುವಿನ ಸೇವೆಯ
ಸಮಯದಲ್ಲಿ ಪಾಲೆಸ್ತೀನ
ಫೊಯಿನೀಕ್ಯ
ಬೆತ್ಸಾಯಿದ
ಜೂಲಿಯಸ್
ಕಪೆರ್ನೌಮ
ಗಲಿಲಾಯ
ಗಲಿಲಾಯ
ಸಮುದ್ರ
(ತಿಬೇರಿಯ)
ಕಾನಾ
ನಜರೇತ್
ಕೈಸರಯ
ದೆಕಪೊಲಿ
ಸಮಾರ್ಯ
ಸಮಾರ್ಯ
ಸುಖರ
ದೊಡ್ಡ ಸಮುದ್ರ
(ಭೂಮಧ್ಯ ಸಮುದ್ರ)
ಯೊರ್ದನ್ ಹೊಳೆ
ಪೆರೆಯ
ಬೇಥಾನ್ಯ
ಯೂದಾಯ
ಯೆರೂಸಲೇಮ
ಬೆತ್ಲೆಹೇಮ
ಮೃತ
ಸಮುದ್ರ

# ಏಳು ಸೂಚಕ ಕಾರ್ಯಗಳು

"ಸೂಚಕ ಕಾರ್ಯ" ಎಂದು ಯೋಹಾನನ ಸುವಾರ್ತೆಯಲ್ಲಿ ಉಪಯೋಗಿಸಿದ್ದು ಯೇಸುವಿನ ಬಲದ ಅದ್ಭುತಕರವಾದ ಪ್ರದರ್ಶನವಾಗಿದೆ. ಅದು ಆತನಲ್ಲಿ ದೇವರ ಕುಮಾರನಂತೆ ವಿಶ್ವಾಸವನ್ನು ಸೃಷ್ಟಿಸುವ ಉದ್ದೇಶಕ್ಕಾಗಿ ಮಾಡಲ್ಪಟ್ಟಿತು. ಯೇಸುವು ಇತರ ಅನೇಕ ಸೂಚಕ ಕಾರ್ಯಗಳನ್ನು ಮಾಡಿದನು ಆದರೆ ಅವು ತನ್ನ ಸುವಾರ್ತೆಯಲ್ಲಿ ಸೇರಿ ಸಲ್ಪಟ್ಟಿಲ್ಲ ಎಂದು ಯೋಹಾನನು ದಾಖಲೆ ಮಾಡಿದ್ದಾನೆ. ಕೂಡಿಸಲ್ಪಟ್ಟವುಗಳು ನಾವು "ಯೇಸು ದೇವಕುಮಾರನಾದ ಕ್ರಿಸ್ತನೆಂದು ನಂಬುವಂತೆ" ಬರೆಯಲ್ಪಟ್ಟಿವೆ ಎಂದು ಅವನು ನಮಗೆ ಹೇಳಿದ್ದಾನೆ (20:30, 31). ಯೋಹಾನನ ಸುವಾರ್ತೆಯಲ್ಲಿ ಏಳು ಸೂಚಕ ಕಾರ್ಯಗಳು ಕಂಡುಬರುತ್ತವೆ ಎಂದು ಸಾಮಾನ್ಯವಾಗಿ ಹೇಳಲ್ಪಟ್ಟಿದೆ. ಯೋಹಾನನ ಸುವಾರ್ತೆಯು ನಿಜವಾಗಿ "ಏಳು ಸೂಚಕ ಕಾರ್ಯಗಳ ಮತ್ತು ದೊಡ್ಡ ಸೂಚಕ ಕಾರ್ಯದ ಪುಸ್ತಕ" (ಪುನರುತ್ಥಾನ) ಎಂದು ಕೆಲವರು ಕೂಡಿಸುತ್ತಾರೆ, ಅದು ಸರಿಯೆಂದು ನಾನು ನಂಬುತ್ತೇನೆ. ಪ್ರತಿಯೊಂದು ಯೇಸುವಿನ ಬಲದ ಬಗ್ಗೆ ಕೆಲವೊಂದು ವಿಶೇಷತೆಯನ್ನು ಪ್ರದರ್ಶಿಸುತ್ತದೆ ಹಾಗೂ ಈ ಕಥೆಯು ಸತ್ಯವಾಗಿದೇ ಇಲ್ಲವೋ ಎಂಬುದನ್ನು ತೀರ್ಮಾನಿಸಲು ವಾಚಕನನ್ನು ಒತ್ತಾಯಪಡಿಸುತ್ತದೆ. ಯೇಸುವಿನ ಜೀವನದ ಯೋಹಾನನ ಪ್ರಸ್ತುತ ಪಡಿಸುವಿಕೆಯಲ್ಲಿ ಏಳು ಸೂಚಕ ಕಾರ್ಯಗಳು ಹೆಗ್ಗುರುತುಗಳಿರುತ್ತವೆ.[1]

*ಸೂಚಕ ಕಾರ್ಯ 1.* ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ್ದು (2:1-11). ಈ ಸೂಚಕ ಕಾರ್ಯವು ಯೇಸುವು ಸೃಷ್ಟಿಯ ಕರ್ತನಾಗಿದ್ದಾನೆ ಎಂಬುದನ್ನು ಪ್ರದರ್ಶಿಸಿತು.

*ಸೂಚಕ ಕಾರ್ಯ 2.* ಪ್ರಧಾನನ ಮಗನನ್ನು ಸ್ವಸ್ಥಪಡಿಸಿದ್ದು (4:46-54). ಈ ಸೂಚಕ ಕಾರ್ಯವು ಯೇಸುವಿಗೆ ದೂರದ ಮತ್ತು ಅಸ್ವಸ್ಥತೆಯ ಮೇಲೆ ಬಲವಿರುವುದೆಂಬುದನ್ನು ಪ್ರದರ್ಶಿಸಿತು.

*ಸೂಚಕ ಕಾರ್ಯ 3.* ಒಬ್ಬ ರೋಗಿಯನ್ನು ಸ್ವಸ್ಥಪಡಿಸಿದ್ದು (5:1-9). ಈ ಸೂಚಕ ಕಾರ್ಯವು ಯೇಸುವಿಗೆ ರೋಗದ ಮೇಲೆ ಬಲವಿರುವುದಷ್ಟೇ ಅಲ್ಲ, ಆದರೆ ಸಮಯದ ಮೇಲೆಯೂ ಬಲವಿರುವುದು ಎಂಬುದನ್ನು ಪ್ರದರ್ಶಿಸಿತು.

*ಸೂಚಕ ಕಾರ್ಯ 4.* ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು (6:1-14). ಈ ಸೂಚಕ ಕಾರ್ಯವು ಯೇಸುವಿಗೆ ಪ್ರಮಾಣದ ಮೇಲೆಯೂ ಬಲವಿದೆಯೆಂಬುದನ್ನು ಪ್ರದರ್ಶಿಸಿತು.

*ಸೂಚಕ ಕಾರ್ಯ 5.* ಯೇಸುವು ಸಮುದ್ರದ ಮೇಲೆ ನಡೆದದ್ದು (6:16-21). ಈ ಸೂಚಕ ಕಾರ್ಯವು ಯೇಸುವು "ಬಿರುಗಾಳಿಯ ಮತ್ತು ತೆರೆಯ ನೈಸರ್ಗಿಕ ಒತ್ತಡಗಳ ಒಡೆಯನು ಹಾಗೂ ಗುರುತ್ವಾಕರ್ಷಣೆಯ ಮತ್ತು ಅದರ ಕರ್ತನು"[2] ಆಗಿದ್ದಾನೆಂಬುದನ್ನು ಪ್ರದರ್ಶಿಸಿತು.

*ಸೂಚಕ ಕಾರ್ಯ 6.* ಹುಟ್ಟು ಕುರುಡನಿಗೆ ಕಣ್ಣು ಕೊಟ್ಟಿದ್ದು (9:1-12). ಈ ಸೂಚಕ ಕಾರ್ಯವು ಯೇಸುವು ಬೆಳಕಿನ ಒಡೆಯನಾಗಿದ್ದಾನೆ ಎಂಬುವುದನ್ನು ಪ್ರದರ್ಶಿಸಿತು. ಈ ಪದಕ್ಕೆ ಈ ಸುವಾರ್ತೆಯಲ್ಲಿ ಬಲವಾದ ಇಮ್ಮಡಿ ಅರ್ಥವಿದೆ.

*ಸೂಚಕ ಕಾರ್ಯ 7.* ಲಾಜರನ್ನು ಬದುಕಿಸಿದ್ದು (11:39-44). ಈ ಸೂಚಕ ಕಾರ್ಯವು ಯೇಸುವು "ಮರಣದ ಮೇಲೆ ಒಡೆಯನು ಹಾಗೂ ಜೀವದಾಯಕನು" ಆಗಿದ್ದಾನೆಂಬುದನ್ನು ಪ್ರದರ್ಶಿಸಿತು.

ಯೋಹಾನನ ಸುವಾರ್ತೆಯಲ್ಲಿ ಸೂಚಕ ಕಾರ್ಯಗಳು[3] ಆಶ್ಚರ್ಯಕರವಾದ ಕ್ರಮದಲ್ಲಿ ಪ್ರಸ್ತುತಪಡಿಸಲ್ಪಟ್ಟಿವೆ. ನಂಬಲಿಕ್ಕೆ ಅತೀ ಸುಲಭವಾದದ್ದು, ನೀರನ್ನು ದ್ರಾಕ್ಷಾರಸವಾಗಿ ಮಾಡಿದ್ದು,

ಮೊದಲನೆಯದಾಗಿದೆ. ನಂಬಲಿಕ್ಕೆ ಅತೀ ಕಠಿಣವಾದದ್ದು, ಸತ್ತವರೊಳಗಿಂದ ಲಾಜರನ್ನು ಎಬ್ಬಿಸಿದ್ದು ಕೊನೆಯದಾಗಿದೆ. ಈ ಎಲ್ಲಾ ಏಳು ಸೂಚಕ ಕಾರ್ಯಗಳು ಕೊನೆಯ ಮತ್ತು ಅತೀ ದೊಡ್ಡದಾದ ಸೂಚಕ ಕಾರ್ಯಕ್ಕೆ, ಸತ್ತವರೊಳಗಿಂದ ಯೇಸುವಿನ ಪುನರುತ್ಥಾನಕ್ಕೆ ಸಿದ್ಧತೆಗಳಾಗಿವೆ![4]

---

ಟಿಪ್ಪಣಿಗಳು

[1]Homer Hailey, *That You May Believe: Studies in the Gospel of John* (Grand Rapids, Mich.: Baker Book House, 1973). [2]Ibid., 112. [3]ಈ ಸೂಚಕ ಕಾರ್ಯಗಳಲ್ಲಿ ಎರಡು ಮಾತ್ರವೇ ಇತರ ಸುವಾರ್ತೆಗಳಲ್ಲಿ ಕಂಡು ಬರುತ್ತದೆ: ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು (ಮತ್ತಾಯ 14:13-21; ಮಾರ್ಕ 6:34-44; ಲೂಕ 9:12-17) ಮತ್ತು ಯೇಸು ನೀರಿನ ಮೇಲೆ ನಡೆದದ್ದು (ಮತ್ತಾಯ 14:22-33; ಮಾರ್ಕ 6:45-51). [4]ಯೇಸುವು ತನ್ನ ಶಿಷ್ಯರಿಗೆ ಮೀನು ಹಿಡಿಯುವದನ್ನು ಒದಗಿಸಿಕೊಟ್ಟಾಗ, ಯೇಸುವಿನ ಪುನರುತ್ಥಾನದ ನಂತರದ ಸೇವೆಯಲ್ಲಿ ಒಂದು ಇತರ ಸೂಚಕ ಕಾರ್ಯ ಸಂಭವಿಸಿತು (21:1-11).

# ಯೇಸುವಿಗಾಗಿ ಯೋಹಾನನು ಹಕ್ಕುಸಾಧಿಸಿದ್ದಂತೆ ಆತನು ಎಲ್ಲವೂ ಆಗಿದ್ದನೋ?

ಕ್ರಿಸ್ತನಲ್ಲಿ ನಂಬಿಕೆಯನ್ನು ಪ್ರೋತ್ಸಾಹಿಸಲು ಯೋಹಾನನು ತನ್ನ ಸುವಾರ್ತೆಯನ್ನು ಬರೆದನು. ಅವನ ಸಾಧಿಸುವಿಕೆಗಳನ್ನು ಲಭ್ಯವಿದ್ದ ಪುರಾವೆಗಳು ಪ್ರತಿಪಾದಿಸುತ್ತವೆಯೋ? ಯೋಹಾನನಿಂದ ಪ್ರಸ್ತುತ ಪಡಿಸಲ್ಪಟ್ಟ ಸಾಕ್ಷಿಯನ್ನು ನಾವು ಪರೀಕ್ಷಿಸುವಂತೆ, ನಾವು ಅದನ್ನು ವಿವೇಕಕ್ಕೆ ಅನುಗುಣವಾಗಿ ಅಳೆಯತಕ್ಕದ್ದು ಮತ್ತು ಆಮೇಲೆ ಉತ್ತರವನ್ನು ನಿರ್ಣಯಿಸತಕ್ಕದ್ದು. ಒಂದು ಸಾಧ್ಯವಾದ ತೀರ್ಮಾನಕ್ಕೆ ಒಂದರ ನಂತರ ಒಂದರಂತೆ ಐದು ತೀರ್ಮಾನಗಳು ನಮಗೆ ಬಿಡಲ್ಪಟ್ಟಿವೆ.[1]

*ತೀರ್ಮಾನ 1.* ಯೇಸುವು ಎಂದೂ ಜೀವಿಸಿರಲಿಲ್ಲ, ಆದರೆ ಮಾನವ ಮನಸ್ಸಿನ ಉತ್ಪನ್ನ ವಾಗಿದ್ದನು - ಯೋಹಾನನ ಮತ್ತು ಆತನ ಜೀವನ ಹಾಗೂ ಚಟುವಟಿಕೆಗಳ ದಾಖಲೆಗಳನ್ನು ಬಿಟ್ಟು ಇತರ ಸುವಾರ್ತಿಕರ ಕಲ್ಪನೆಯ ಕಟ್ಟುಕತೆಯಾಗಿದ್ದನು. ಯೋಹಾನನು ಯೇಸುವನ್ನು ಪರಿಚಯಿಸಿದ್ದನ್ನು ನಾವು ವಿಚಾರಿಸುತ್ತಿರುವದರಿಂದ ಈ ತೀರ್ಮಾನವು ಯೇಸುವಿಗಾಗಿ ಯೋಹಾನನು ಮಾಡಿದ ಘೋಷಣೆಗಳು ಮತ್ತು ಅವನು ಕೊಟ್ಟ ಪುರಾವೆಗಳು ಅವನ ಸ್ವಂತ ಆಧಾರವಿಲ್ಲದ ಊಹೆಯಾಗಿದೆ ಎಂದು ಅರ್ಥಕೊಡುತ್ತದೆ.

*ತೀರ್ಮಾನ 2.* ಯೇಸುವು ಜೀವಿಸಿದ್ದನು, ಆದರೆ ಆತನು ಕೇವಲ ಒಬ್ಬ ಒಳ್ಳೆಯ ಮನುಷ್ಯನಾಗಿದ್ದನು, ಒಬ್ಬ ದೊಡ್ಡ ಬೋಧಕನಾಗಿದ್ದನು, ಒಬ್ಬ ಬುದ್ಧಿವಂತ ತತ್ವಜ್ಞಾನಿಯಾಗಿದ್ದನು ಮತ್ತು ಒಬ್ಬ ಅಗಾಧವಾದ ನೀತಿ ಬೋಧಕನಾಗಿದ್ದನು. ಆತನು ತನಗಿಂತ ಮೊದಲು ಇಲ್ಲವೇ ಅನಂತರದಲ್ಲಿಯ ಜೀವಿಸುವ ಯಾವುದೇ ವ್ಯಕ್ತಿಗಿಂತ ಹೆಚ್ಚಾಗಿ ಆತ್ಮದಂತೆ ದೇವರ ದೊಡ್ಡದಾದ ಹಾಗೂ ಆಳವಾದ ತತ್ವವನ್ನು ಹೊಂದಿಕೊಂಡಿದ್ದನು. ಯೇಸುವು ತನ್ನ ಶಿಷ್ಯರ ಮನಸ್ಸುಗಳಲ್ಲಿ ತನ್ನ ಬಗ್ಗೆ ಯೋಹಾನನಿಂದ ಹೇಳಲ್ಪಟ್ಟ ತತ್ವವನ್ನು ಹುಟ್ಟಿಸಲು ಮತ್ತು ಬೆಳೆಸಲು ಶಕ್ತನಾಗಿದ್ದನು.

*ತೀರ್ಮಾನ 3.* ಯೇಸುವು ಮೆಸ್ಸೀಯನಾಗಿರಲಿಲ್ಲ, ಆದರೆ ಉತ್ತರ ಪಾಲೆಸ್ತೀನನ ಒಬ್ಬ ಆಳವಾದ ಧಾರ್ಮಿಕ ಯೆಹೂದ್ಯನಂತೆ, ಆತನು ತಾನಾಗಿದ್ದೇನೆಂದು ನಂಬಿದ್ದನು. ಈ ಭರವಸೆಯಲ್ಲಿ ಮತ್ತು ಹಳೇ ಒಡಂಬಡಿಕೆಯ ತನ್ನ ಪರಿಪೂರ್ಣಜ್ಞಾನದ ಮುಖಾಂತರ, ಆತನು ನಿಷ್ಕಪಟವಾದ ಹಾಗೂ ಸುಲಭವಾಗಿ ಮೋಸ ಪಡಿಸಬಹುದಾದ ರೈತರ ಹಾಗೂ ಗಲಿಲಾಯದ ಗ್ರಾಮೀಣ ಜನರ ಮೇಲೆ, ಅವರು ಆತನು ಕ್ರಿಸ್ತನಾಗಿದ್ದಾನೆಂದು ನಂಬುವಂತೆ ಪ್ರಭಾವ ಬೀರಲು ಶಕ್ತನಾಗಿದ್ದನು.

*ತೀರ್ಮಾನ 4.* ಯೇಸುವು ಒಬ್ಬ ಚಾಣಾಕ್ಷ ಹಾಗೂ ಕಪಟತನದ ವಂಚಕನಾಗಿದ್ದು, ಯೋಹಾನನಿಗೆ ಮತ್ತು ಇತರರಿಗೆ ಅವರ ನಿರೀಕ್ಷೆಗಳ ಮೆಸ್ಸೀಯನು ತಾನಾಗಿದ್ದೇನೆಂದು ನಂಬಿಕೆ ಹುಟ್ಟಿಸುವಲ್ಲಿ ಶಕ್ತನಾಗಿದ್ದನು. ಆತನು ಚರಿತ್ರೆಯಲ್ಲಿ ಅತ್ಯಂತ ದೊಡ್ಡ ಮೋಸ ಗಾರನಾಗಿದ್ದಾನೆ; ಯಾಕಂದರೆ ಆತನ ವಂಚನೆಯಿಂದ ಅಂದಿನಿಂದ ಮಿಲಿಯಗಟ್ಟಲೆ ಜನರು ಆತನಿಂದ ಮೋಸಗೊಳಿಸಲ್ಪಟ್ಟಿದ್ದಾರೆ ಮತ್ತು ಮರುಳುಗೊಳಿಸಲ್ಪಟ್ಟಿದ್ದಾರೆ.

*ತೀರ್ಮಾನ 5.* ಯೇಸುವು ಯೋಹಾನನು ಘೋಷಿಸಿದಂತೆ ಮತ್ತು ತನ್ನ ಬಗ್ಗೆ ತಾನು ಹೇಳಿಕೊಂಡಂತೆ; ಕ್ರಿಸ್ತನು, ದೇವರ ಕುಮಾರನು, ಪ್ರವಾದನೆಯ ಮೆಸ್ಸೀಯನು ಆಗಿದ್ದನು.

ಈ ಪರ್ಯಾಯಗಳಲ್ಲಿ ಮೊದಲನೆಯದನ್ನು ನಾವು ಯೋಚಿಸುವಾಗ, ಯೋಹಾನನ ಬಗ್ಗೆ ಪ್ರಶ್ನೆಗಳನ್ನು ಎದುರಿಸುತ್ತೇವೆ. ಅಂಥ ರೀತಿಯಲ್ಲಿ ಹಕ್ಕು ಸಾಧನೆಗಳನ್ನು ಮಾಡುವಂತೆ ಇರುವ ಪಾತ್ರವನ್ನು ಸೃಷ್ಟಿಸುವಷ್ಟು ಅವನು ದೊಡ್ಡವನಾಗಿದ್ದನೋ? ಯೇಸುವಿಗೆ ಹೊಂದಿಸಿದ ಬೋಧನೆಯನ್ನು ತನ್ನ ಸ್ವಂತ ಕಲ್ಪನೆಯಿಂದ ಸೃಷ್ಟಿಸಲು ಅವನು ಶಕ್ತನಾಗಿದ್ದನೋ? ತನ್ನ ಸುವಾರ್ತೆ

ಯಲ್ಲಿ ಜೀವಿಸುವಂತೆ ಹಾಗೂ ತನ್ನ ಪುಸ್ತಕವು ಶತಮಾನಗಳವರೆಗೆ ಉಳಿಯುವಂತೆ ತಮ್ಮ ಸಾಕ್ಷಿಯನ್ನು ಹೊಂದಿಸುವಂತೆ ಇರುವ ಪಾತ್ರಗಳನ್ನು ಸೃಷ್ಟಿಸಲು ಅವನು ಶಕ್ತನಾಗಿದ್ದನೋ? ಸರಳವಾಗಿ ಮುಂದಿಟ್ಟರೆ ಯಾವುದು ಹೆಚ್ಚು ದೊಡ್ಡ ಆಶ್ಚರ್ಯವಾಗುತ್ತದೆ; ಯೇಸುವು ಮತ್ತು ಯೋಹಾನನು ಪ್ರಸ್ತಾಪ ಮಾಡಿದಂಥ ಘಟನೆಗಳ ಪುರಾವೆಯೋ, ಇಲ್ಲವೇ ಯೇಸುವಿನಂಥ ಪಾತ್ರದ ಹಾಗೂ ಗಲಿಲಾಯದ ಬೆಸ್ತನ ಕಲ್ಪನೆಯಿಂದ ಬಂದ ಪುರಾವೆಯೋ? ವಿವೇಚನಾ ಶಕ್ತಿಯು ಉತ್ತರವನ್ನು ನಿರ್ಧರಿಸತಕ್ಕದ್ದು.

ಎರಡನೆಯ ಪರ್ಯಾಯವು ಯೇಸುವಿನ ಹೇಳಿಕೆಗಳ ಕಾರಣದಿಂದ ಕೈಬಿಡಲ್ಪಟ್ಟಿದೆ. ಆತನ ಹಕ್ಕು ಸಾಧನೆಗಳು ಆತನು *ಕ್ರಿಸ್ತನಾಗಿದ್ದನು* ಇಲ್ಲವೇ ಆತನು ಒಳ್ಳೇ ಮನುಷ್ಯನಾಗಿರಲಿಲ್ಲ ಎಂಬಂತೆ ಇವೆ. ಆತನು ತಾನು ಯಾರು ಎಂದು ಹೇಳಿ ಕೊಂಡನೋ ಅದಾಗಿರದಿದ್ದರೆ, ಆತನು ಒಬ್ಬ ವಂಚಕನೂ, ಒಬ್ಬ ದೇವಧೂಷಕನೂ, ಒಬ್ಬ ಕಪಟಿಯೂ, ಒಬ್ಬ ಮೋಸಗಾರನೂ ಮತ್ತು ಒಬ್ಬ ಸುಳ್ಳು ಹೇಳುವವನೂ ಆಗಿರುತ್ತಿದ್ದನು. ಒಬ್ಬನು ತನ್ನ ಬಗ್ಗೆ ಸುಳ್ಳು ಹೇಳಿಕೆಗಳನ್ನು ಕೊಟ್ಟು, ಅದೇ ಸಮಯದಲ್ಲಿ ಒಬ್ಬ ಒಳ್ಳೆಯ ಮನುಷ್ಯನಾಗಿರಲಾರನು.

ಮೂರನೆಯ ಪರ್ಯಾಯವು ಖಾಲಿಯಾದ ಸಮಾಧಿಯನ್ನು, ತಾರ್ಸದ ಸೌಲನ ಮಾರ್ಪಡುವಿಕೆಯು ಹಾಗೂ ಕೆಸಲದ ಬಗ್ಗೆ ಇಲ್ಲವೇ ಅನ್ಯರ ಜಗತ್ತಿನ ಮೇಲೆ ಮತ್ತು ಚರಿತ್ರೆಯ ಮೇಲೆ ಯೇಸುವಿನ ಪ್ರಭಾವವನ್ನು ವಿವರಿಸುವದಿಲ್ಲ.

ನಾಲ್ಕನೆಯ ಪರ್ಯಾಯವು, ಜಗತ್ತಿನ ಅತೀ ದೊಡ್ಡ ವಂಚಕನ, ಮೋಸಗಾರನ ಮತ್ತು ಸುಳ್ಳು ಹೇಳುವವನ ಫಲವೆಂದು ಮಾನವನಿಗೆ ತಿಳಿದಿರುವ ದೇವರ ಬಗ್ಗೆ ಅತೀ ದೊಡ್ಡ ತತ್ವವನ್ನು ಹಾಗೂ ನೀತಿ ತತ್ವಗಳ ಮತ್ತು ನೈತಿಕತೆಗಳ ಅತೀ ದೊಡ್ಡ ಪದ್ಧತಿಯನ್ನು ಸ್ವೀಕರಿಸುವ ಸಮಸ್ಯೆಯೊಂದಿಗೆ ನಮ್ಮನ್ನು ಬಿಡುತ್ತದೆ. ಇದು ಅಸಂಬದ್ಧವಾಗಿದೆ, ಯಾಕಂದರೆ, ಒಂದು ಮರವು ತನ್ನ ಸ್ವಂತ ಜಾತಿಯ ಹಣ್ಣನ್ನು ಕೊಡುತ್ತದೆ ಎಂಬ ಸತ್ಯವನ್ನು ಎಲ್ಲರೂ ಸ್ವೀಕರಿಸುತ್ತಾರೆ. ಅಂಥ ಒಳ್ಳೆ ಫಲವನ್ನು ದುಷ್ಟ ಮರವು ಉತ್ಪಾದಿಸಲಾರದು.

ಯೇಸುವು ಒಬ್ಬ ಒಳ್ಳೆಯ ಮನುಷ್ಯನಾಗಿದ್ದನು, ಆತನು ದೇವರ ಬಗ್ಗೆ ಜಗತ್ತಿನ ಅತ್ಯುನ್ನತವಾದ ತತ್ವವನ್ನು ಪ್ರಕಟಿಸಿದನು, ಮತ್ತು ಆತನು ಬೋಧಿಸಿದ ನೀತಿ ನಿಯಮಗಳು, ನೈತಿಕ ಗುಣಗಳು ದೋಷವಿಲ್ಲದವುಗಳಾಗಿರುವವು ಎಂಬುದು ತೋರಿ ಸಲ್ಪಡುವದಾದರೆ, ಆಗ ನ್ಯಾಯಯುಕ್ತವಾದದ್ದಾಗಿ ಸ್ವೀಕರಿಸಲ್ಪಡ ಬಹುದಾದ ಒಂದರಂತೆ ಐದನೆಯ ಪರ್ಯಾಯದೊಂದಿಗೆ ಮಾತ್ರ ನಾವು ಬಿಡಿಸಲ್ಪಡುತ್ತೇವೆ. ಯೋಹಾನನಿಂದ ಪ್ರಸ್ತುತ ಪಡಿಸಲ್ಪಟ್ಟ ಪುರಾವೆಯನ್ನು ವಿವೇಚನೆಯು ತೂಗುವಂತೆ, ವಾಚಕನು ಯೇಸುವಿನೊಂದಿಗೆ ತಾನು ಏನು ಮಾಡಬೇಕು ಎಂಬುದರ ಬಗ್ಗೆ ನಿರ್ಣಯಿಸಿಕೊಳ್ಳತಕ್ಕದ್ದು. ಪುಸ್ತಕವು ಇಲ್ಲಿದೆ; ಅದು ಹೇಳುವಂಥದ್ದನ್ನು ಹೇಳುತ್ತದೆ. ಮತ್ತು ಅದು ವಾಸ್ತವಾಂಶವಾಗಿರ ಬಹುದು ಇಲ್ಲವೇ ಕಟ್ಟು ಕಥೆಯಾಗಿರಬಹುದು, ಅದು ವಾಸ್ತವಾಂಶವಾಗಿದ್ದರೆ, ಆಗ ಯೇಸುವು ಕ್ರಿಸ್ತನು, ದೇವರ ಕುಮಾರನು ಮತ್ತು ಜಗತ್ತಿನ ರಕ್ಷಕನು ಆಗಿದ್ದಾನೆ. ಅದು ಕಟ್ಟು ಕಥೆಯಾಗಿದ್ದರೆ, ಆಗ ಯೋಹಾನನು ತನ್ನ ವಂಚನೆಗಾಗಿ ತಿಳಿದ ಉದ್ದೇಶವಿಲ್ಲದೇ ಧೈತ್ಯಾಕಾರದ ಪ್ರಮಾಣಗಳ ವಂಚನೆಯನ್ನು ಮಾನವ ಕುಲದ ಮೇಲೆ ಶಾಶ್ವತಪಡಿಸಿದ್ದಾನೆ.

---

ಟಿಪ್ಪಣಿ

[1]Homer Hailey, *That You May Believe: Studies in the Gospel of John* (Grand Rapids, Mich.: Baker Book House, 1973).

# “ನಾನು ಆಗಿದ್ದೇನೆ”ಯಂತೆ ಯೇಸು

ಎಲ್ಲಾ ಸುವಾರ್ತಾ ಬರಹಗಾರರಲ್ಲಿ, ಯೋಹಾನನು ಯೇಸುವು ತನ್ನ ಬಗ್ಗೆ ತಾನೇ ಹೇಳಿದ ಆತನ ನಿಜವಾದ ಹೇಳಿಕೆಗಳನ್ನು ದಾಖಲೆ ಮಾಡುವದರ ಮುಖಾಂತರ ಕ್ರಿಸ್ತನ ದೈವತ್ವಕ್ಕೆ ಅತೀ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. “ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ” (8:58) ಎಂದು ಕ್ರಿಸ್ತನು ಹೇಳಿದಾಗ, ಉರಿಯುವ ಪೊದೆಯ ಬಳಿಯಲ್ಲಿ ದೇವರು ಮೋಶೆಗೆ ಪ್ರಕಟಿಸಿದ ಹೆಸರನ್ನು ಆತನು ತನ್ನದಾಗಿ ಹೇಳಿ ಕೊಳ್ಳುತ್ತಿದ್ದಾನೆ ಎಂಬುದನ್ನು ಜನರು ತಿಳಿದುಕೊಂಡರು (ವಿಮೋಚನಕಾಂಡ 3:14). ಇದು ದೇವದೂಷಣೆ ಎಂದೆಣಿಸಿ ಜನರು ಆತನಿಗೆ ಕಲ್ಲೆಸೆಯಲು ಪ್ರಯತ್ನಿಸಿದ್ದ ಕಾರಣವಾಯಿತು. ಕ್ರಿಸ್ತನು ನಿತ್ಯವಾದ *“I Am”* ಆಗಿದ್ದನು ಮತ್ತು ಆಗಿರುತ್ತಾನೆ. ಕಂಡೋಕ್ತನು ನುಡಿಗಳ ಒಂದು ಸರಣಿಯಲ್ಲಿ, ಆತನು ಆ ಹೇಳಿಕೆಯನ್ನು ವಿಸ್ತರಿಸಿ ಹೇಳಿದನು:

1. ನಾನೇ ಜೀವಕೊಡುವ ರೊಟ್ಟಿ (6:35).
2. ನಾನೇ ಲೋಕಕ್ಕೆ ಬೆಳಕು (8:12; 9:5).
3. ನಾನೇ ಬಾಗಲಾಗಿದ್ದೇನೆ (10:7).
4. ನಾನೇ ಒಳ್ಳೇ ಕುರುಬನು (10:11, 14).
5. ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ (11:25).
6. ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ (14:6).
7. ನಾನೇ ನಿಜವಾದ ದ್ರಾಕ್ಷೆ ಬಳ್ಳಿ (15:1).

ಯೋಹಾನನಲ್ಲಿ ಇತರ ಸಹಾಯಕ ಹೇಳಿಕೆಗಳು “ನಾನೂ ತಂದೆಯೂ ಒಂದಾಗಿದ್ದೇವೆ” (10:30) ಮತ್ತು “ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ” (14:9).

# ಯೇಸುವು ಕಳುಹಿಸಲ್ಪಟ್ಟಾತನಂತೆ

ಯೇಸುವು ತನ್ನ ಕೇಳುಗರ ಮನಸ್ಸುಗಳಲ್ಲಿ ತನ್ನ ಗುರುತನ್ನು ಮತ್ತು ತನ್ನ ಉದ್ದೇಶವನ್ನು ಸ್ಥಾಪಿಸಲು ಕಾರ್ಯಮಾಡುತ್ತಿದ್ದಂತೆ, ಆತನು ತಾನು ದೇವರಿಂದ "ಕಳುಹಿಸಲ್ಪಟ್ಟವನು" ಎಂಬುದನ್ನು ಒತ್ತಿ ಹೇಳಿದನು.

1. ಯೇಸುವು ತಾನು ತಂದೆಯಿಂದ ಕಳುಹಿಸಲ್ಪಟ್ಟಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿದನು (6:57; 7:29; 8:42; 10:36).
2. "ನನ್ನನ್ನು ಕಳುಹಿಸಿದಾತನು ನನ್ನೊಂದಿಗಿದ್ದಾನೆ ..." ಎಂದು ಹೇಳಿದನು (8:29).
3. ಆತನು ತನ್ನನ್ನು ಕಳುಹಿಸಿದ ತಂದೆಯ ಮಾತುಗಳನ್ನು ಹೇಳಿದನು (3:34; 7:16; 12:49; 14:24).
4. ಆತನು ತನ್ನನ್ನು ಕಳುಹಿಸಿದಾತನ ಚಿತ್ತವನ್ನು ಇಲ್ಲವೇ ಕೆಲಸಗಳನ್ನು ಮಾಡಿದನು (4:34; 5:30, 36; 6:38, 39; 9:4).
5. ಕಳುಹಿಸಲ್ಪಟ್ಟಾತನಲ್ಲಿ ನಂಬಿಕೆ ಇಡಲು ಜಗತ್ತು ಕರೆಯಲ್ಪಟ್ಟಿತು (6:29; 11:42; 17:8, 21, 23, 25).
6. "ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆದ ಹೊರತು ಯಾವುನೂ ನನ್ನ ಬಳಿಗೆ ಬರಲಾರನು ..." ಎಂದು ಯೇಸು ಹೇಳಿದನು (6:44).
7. ತನ್ನನ್ನು ಕಳುಹಿಸಿಕೊಟ್ಟ ತಂದೆಯು ತನ್ನ ಬಗ್ಗೆ ಸಾಕ್ಷಿ ಕೊಡುವನೆಂದು ಆತನು ಹೇಳಿದನು (5:37; 8:18).
8. "ನನ್ನನ್ನು ನೋಡುವನು ನನ್ನನ್ನು ಕಳುಹಿಸಿಕೊಟ್ಟಾತನನ್ನು ನೋಡುವವನಾಗಿದ್ದಾನೆ" ಎಂದು ಆತನು ಹೇಳಿದನು (12:45).
9. ಯೇಸುವನ್ನು ಸ್ವೀಕರಿಸುವುದು ಇಲ್ಲವೇ ತಿರಸ್ಕರಿಸುವುದು ಆತನನ್ನು ಕಳುಹಿಸಿಕೊಟ್ಟಾತನನ್ನು ಸ್ವೀಕರಿಸುವುದು ಇಲ್ಲವೇ ತಿರಸ್ಕರಿಸುವುದು ಆಗಿದೆ (5:23, 38; 12:44; 13:20).
10. ಯೇಸುವು ತನ್ನನ್ನು ಕಳುಹಿಸಿಕೊಟ್ಟಾತನ ಬಳಿಗೆ ಹೋಗುವೆನು ಎಂದು ಹೇಳಿದನು (7:33; 16:5).
11. ಕಳುಹಿಸಿಕೊಟ್ಟಾತನನ್ನು ತಿಳಿಯುವದರ ಮುಖಾಂತರ ನಿತ್ಯಜೀವವೂ ಬರುವುದೆಂದು ಆತನು ವಾಗ್ದಾನ ಮಾಡಿದನು (5:24; 17:3).
12. ತನ್ನನ್ನು ತಂದೆಯು ಕಳುಹಿಸಿಕೊಟ್ಟಂತೆ, ಆತನು ತನ್ನ ಶಿಷ್ಯರನ್ನು ಕಳುಹಿಸುವೆನೆಂದು ಹೇಳಿದನು (17:18; 20:21).
13. ಯೇಸುವು ತನ್ನ ಹಿಂಬಾಲಕರಿಗೆ ಅವರು ತನ್ನನ್ನು ಕಳುಹಿಸಿಕೊಟ್ಟಾತನನ್ನು ತಿಳಿಯದವರಿಂದ ತಿರಸ್ಕರಿಸಲ್ಪಡುವರೆಂದು ಎಚ್ಚರಿಕೆ ಕೊಟ್ಟನು (15:21).
14. ಆತನು ತಾನೂ ಮತ್ತು ತನ್ನನ್ನು ಕಳುಹಿಸಿಕೊಟ್ಟಾತನು ನಿಜವಾಗಿರುವರೆಂದು ಹೇಳಿದನು (7:18, 28; 8:16, 26).

# ನಂಬಿಕೆಯ ಹಂತಗಳು

ಯೋಹಾನನ ಸುವಾರ್ತೆಯು ನಂಬಿಕೆಯನ್ನು ಹುಟ್ಟಿಸುವದಕ್ಕಾಗಿ ಬೆಳಿಸುವದಕ್ಕಾಗಿಯೂ ಬರೆಯಲ್ಪಟ್ಟಿದ್ದರಿಂದ, ಒಬ್ಬ ವ್ಯಕ್ತಿಯಲ್ಲಿ ನಂಬಿಕೆಯು ಹೇಗೆ ಬೆಳೆಯುತ್ತದೆ ಎಂಬ ಪ್ರಶ್ನೆಗೆ ಈ ಅಧ್ಯಯನದಲ್ಲಿ ನಮಗೆ ಬಹಳ ಆಸಕ್ತಿಯುಳ್ಳದ್ದಾಗಿದೆ. ನಂಬಿಕೆಯು ಈ ಕೆಳಗಿನ "ವಿಧಗಳಲ್ಲಿ" ಇಲ್ಲವೇ ಹಂತಗಳಲ್ಲಿ ಬೆಳೆಯುತ್ತದೆ ಎಂದು ಜಾನ್ ವೆಸ್ಟರಹೊಪ್ III ವಾದಿಸಿದನು.[1]

## ಅನುಭವಿಸಲ್ಪಟ್ಟ ನಂಬಿಕೆ

ಅನುಭವಿಸಲ್ಪಟ್ಟ ನಂಬಿಕೆಯು ಪ್ರಾಥಮಿಕವಾಗಿ ಒಂದು ಮಗುವಿನಿಂದ ಗಮನಿಸಲ್ಪಟ್ಟ ನಂಬಿಕೆಯಾಗಿದೆ, ಯಾಕಂದರೆ ಅದು ಅದರ ನಂಬಿಕೆಯೊಂದಿಗಿನ ಏಕೈಕ ಸಂಬಂಧವಾಗಿರುತ್ತದೆ. ಹೀಗಿದ್ದರೂ, ಕೆಲವು ವಿಧಗಳಲ್ಲಿ ಅದು ಒಬ್ಬನ ಜೀವನದಲ್ಲೆಲ್ಲಾ ನಂಬಿಕೆಯ ಮಹತ್ವದ ವಿಷಯವಾಗಿ ಮುಂದುವರಿಯುತ್ತದೆ. ಅನುಭವಿಸಲ್ಪಟ್ಟ ನಂಬಿಕೆಯು ಚುರುಕಾಗಿರುವದಕ್ಕಿಂತ ಹೆಚ್ಚಾಗಿ ನಿಷ್ಕ್ರಿಯವಾದದ್ದಾಗಿರುತ್ತದೆ: ಶಿಶುವು ಸುಮ್ಮನೇ ಇತರರ ನಂಬಿಕೆಯನ್ನು ಗಮನಿಸುತ್ತದೆ ಮತ್ತು ಪ್ರತಿಕ್ರಿಯೆ ತೋರಿಸುತ್ತದೆ. ವೆಸ್ಟರ್ ಹೊಪ್ಪ್‌ರು ಹೀಗೆ ಹೇಳಿದ್ದಾರೆ, "ಅನುಭವವು ನಂಬಿಕೆಗೆ ಅಸ್ತಿವಾರವಾಗಿದೆ. ಒಬ್ಬ ವ್ಯಕ್ತಿಯು ಮೊದಲು ಕ್ರಿಸ್ತನನ್ನು ಒಂದು ದೈವಜ್ಞಾನ ಶಾಸ್ತ್ರೀಯ ಒಪ್ಪಿಗೆಯಂತೆ ಅಲ್ಲ ಆದರೆ ಒಂದು ಪರಿಣಾಮಕಾರಿಯಾದ ಅನುಭವದಂತೆ ಕಲಿತು ಕೊಳ್ಳುತ್ತಾನೆ"[2] ಆದುದರಿಂದ ಒಂದು ಸ್ಥಿರವಾದ, ಪ್ರೀತಿಯ ಕ್ರೈಸ್ತ ಮನೆಯು ಇಲ್ಲವೇ ಬೈಬಲ್ ಕ್ಲಾಸ್ ಅಷ್ಟು ಮಹತ್ವದ್ದಾಗಿದೆ. ಈ ಸಂದರ್ಶನಗಳು ನಕಾರಾತ್ಮಕವಾದ ಪರಿಣಾಮವನ್ನು ಮಾಡಿದರೆ, ಮಗುವಿನ ನಂಬಿಕೆಗೆ ಬೆಳೆಯಲು ಮತ್ತು ನಂಬಿಕೆಯ ಇತರ ಹಂತಗಳಿಗೆ ಪ್ರಗತಿ ಹೊಂದಲು ಕಾರಣವಿರುವದಿಲ್ಲ.

## ಸ್ವೀಕಾರ ಮಾಡಲ್ಪಡುವ ನಂಬಿಕೆ

ಸ್ವೀಕಾರ ಮಾಡಲ್ಪಡುವ ನಂಬಿಕೆಯೊಂದಿಗೆ ಮುಖ್ಯವಾದ ಶಬ್ದವು "ಸಮಾಜ" ಎಂಬುದಾಗಿರುತ್ತದೆ. ಪ್ರಗತಿಹೊಂದುತ್ತಿರುವ ವಿಶ್ವಾಸದ ಪಯಣದಲ್ಲಿ ನಂಬಿಕೆಯ ಈ ಹಂತವು ಒಳಪಟ್ಟಿರುವದನ್ನು, ಪ್ರೀತಿಸುವದನ್ನು ಮತ್ತು ವಿಶ್ವಾಸಿಗಳ ಸಮಾಜದ ಅಧಿಕಾರವನ್ನು ಒಪ್ಪಿಕೊಳ್ಳುವದನ್ನು ಒಳಗೊಂಡಿತ್ತು. "ಗುಂಪು" ಈ ಹಂತದಲ್ಲಿ ಗುರುತಿಸುವಿಕೆಯ ಮತ್ತು ಕುಟುಂಬದ ಮೂಲವಾಗುತ್ತದೆ. ನೀವು ಒಂದು ಸಭೆಗೆ "ಒಳಪಟ್ಟಿದ್ದೀರಿ" ಎಂಬುದನ್ನು ಯಾವಾಗ ಮೊದಲು ತಿಳಿದು ಕೊಂಡಿರಿ - ಅವರ ಅನ್ಯೋನ್ಯತೆಯಲ್ಲಿ ನೀವು ಅಗತ್ಯವಾಗಿದ್ದಿರಿ, ಬೇಕಾದವರಾಗಿದ್ದಿರಿ ಮತ್ತು ಸ್ವಾಗತಿಸಲ್ಪಟ್ಟ ಎಂಬುದನ್ನು ಯಾವಾಗ ತಿಳಿದುಕೊಂಡಿರಿ ಎಂಬುದನ್ನು ನೀವು ಜ್ಞಾಪಿಸಿಕೊಳ್ಳ ಬಹುದೋ? ನಾನು ಹದಿಮೂರು ವರ್ಷ ಪ್ರಾಯದವಾರಾಗಿದ್ದಾಗ ಅಂಥ ಒಂದು ಸಮಯವನ್ನು ಜ್ಞಾಪಿಸಿಕೊಳ್ಳುತ್ತೇನೆ. ಒಂದು ಭಾನುವಾರ ಪ್ರಾತಃಕಾಲ ಕರ್ತನ ಭೋಜನ ಸಂಸ್ಕಾರದಲ್ಲಿ ಸಹಾಯ ಮಾಡಿದೆನು. ಆ ದಿನ ಮಧ್ಯಾಹ್ನ ಪಟ್ಟಣದಲ್ಲಿಯ ಆಸ್ಪತ್ರೆಯಲ್ಲಿಯ ರೋಗಿಗಳಿಗೆ ಕರ್ತನ ಭೋಜನವನ್ನು ತೆಗೆದು ಕೊಂಡು ಕೆಲವು ಪುರುಷರ ಗುಂಪಿನೊಂದಿಗೆ ಹೋದೆನು. ಅನಂತರ ಅದೇ ದಿನ, ನಮ್ಮ ಸಾಯಂಕಾಲದ ಆರಾಧನೆಯ ಕೂಟದಲ್ಲಿ ಮುಕ್ತಾಯದ ಪ್ರಾರ್ಥನೆ ಮಾಡಲು ನಾನು ಕರೆಯಲ್ಪಟ್ಟೆನು. ಆ ರಾತ್ರಿಯಲ್ಲಿ ನನಗಿದ್ದ ಒಳಪಟ್ಟಿರುವಿಕೆಯು ಬಲವಾದ ಭಾವನೆಯನ್ನು ನಾನು ಇನ್ನೂ ಜ್ಞಾಪಿಸಿಕೊಳ್ಳುತ್ತಿದ್ದೇನೆ. ನನಗೆ ಒಂದು ಸ್ಥಾನವಿತ್ತು; ನನ್ನ ಜೊತೆ ಕ್ರೈಸ್ತರಲ್ಲಿ ನನ್ನ ಅಗತ್ಯತೆ ಇತ್ತು ಮತ್ತು ನಾವು ಸ್ವಾಗತಿಸಲ್ಪಟ್ಟೆನು. ಇದು ಸ್ವೀಕಾರ ಮಾಡಲ್ಪಡುವ ನಂಬಿಕೆಯಾಗಿದೆ.

## ಹುಡುಕುವಿಕೆಯ ನಂಬಿಕೆ

ನಂಬಿಕೆಯು ಒಂದು ವ್ಯಕ್ತಿಯಾಗಿದ್ದರೆ, ಹುಡುಕುವಿಕೆಯ ನಂಬಿಕೆಯು ಪ್ರೌಢವಸ್ಥೆಯಾಗಿದೆ. ಇದು ಹುಡುಕುವಿಕೆಯ ಪರೀಕ್ಷಿಸುವ ಮತ್ತು ಸಂಶಯಪಡುವ ಸಮಯವಾಗಿದೆ. ಇದು ವಿಶ್ವಾಸಿಯು ಹಳೇ ಉತ್ತರಗಳನ್ನು ಸ್ವೀಕರಿಸದಿರುವ ಹಾಗೂ ತನ್ನ ಸ್ವಂತ ನಂಬಿಕೆಯನ್ನು ಹುಡುಕುವ, ಅತೃಪ್ತಿಯ ಸಮಯವಾಗಿರುತ್ತದೆ. ನಂಬಿಕೆಯ ಬೆಳವಣಿಗೆಯ ಈ ಹಂತದಲ್ಲಿ ಪ್ರತಿಯೊಂದಕ್ಕೂ ಸಂಶಯಪಡುವ ಒಬ್ಬನ ಪ್ರವೃತ್ತಿಯ ಕಾರಣದಿಂದ, ಇದು ಹುಡುಕುವವನಿಗೆ ಮತ್ತು ಇದು ಸಂಭವಿಸುತ್ತಿದ್ದುದನ್ನು ಗಮನಿಸುತ್ತಿರುವ ಕುಟುಂಬಕ್ಕೆ ಮತ್ತು ಸ್ನೇಹಿತರಿಗೆ ಅನುಕೂಲಕರವಲ್ಲದ ಸಮಯವಾಗಿರುತ್ತದೆ. ಯಾವುದರಲ್ಲಿಯಾದರೂ ಬಲವಾಗಿ ನಂಬಲು ನೋಡುವುದಕ್ಕಾಗಿ ವ್ಯಕ್ತಿಯು ಭಿನ್ನವಾದ ವಿಚಾರಗಳೊಂದಿಗೆ ಮತ್ತು ಧಾರ್ಮಿಕ ಆಚರಣೆಗಳೊಂದಿಗೆ ಪ್ರಯೋಗ ಮಾಡಬಹುದು. ಇದು ಒಬ್ಬನ ಸಭೆಯ ಸಮಾಜವನ್ನು ಬಹಳವಾಗಿ ಪೀಡಿ ಸಬಹುದು. ಇದರಿಂದ ಇತರರು ನಂಬಿಕೆಯನ್ನು ಹುಡುಕುತ್ತಿರುವವನಿಗೆ ಬೆನ್ನುಹಾಕಿ, ಪರೀಕ್ಷೆಯನ್ನು ತಿರಸ್ಕಾರವೆಂದು ತಪ್ಪಾಗಿ ತಿಳಿದು ಕೊಳ್ಳಬಹುದು. ನಂಬಿಕೆಯ ಈ ಅನಿಶ್ಚಿತ ಹಂತದಲ್ಲಿರುವವರಿಗೆ ಯಾವ ರೀತಿಯ ಪ್ರತಿಕ್ರಿಯೆ ತೋರಿಸಬೇಕೆಂಬುದನ್ನು ವೆಸ್ಟರ್ ಹೊಫ್ ವಿವರಿಸಿದನು:

> ಈ ಸ್ಥಿತಿಯಲ್ಲಿ ಕೆಲವು ವ್ಯಕ್ತಿಗಳು ಸಭೆಯ ಹೊರಗೆ ಹೋಗಲು ಒತ್ತಾಯಿಸಲ್ಪಡುತ್ತಾರೆ, ಕೆಲವರು ಎಂದೂ ಹಿಂದಿರುಗಿ ಬರದೇ ಇರುವುದು ದುಃಖಕರವಾದದ್ದಾಗಿರುತ್ತದೆ; ಇತರರು ತಮ್ಮ ಜೀವಿತಗಳ ಉಳಿದ ಸಮಯದಲ್ಲಿ ನಂಬಿಕೆಯನ್ನು ಹುಡುಕುತ್ತ ಉಳಿದು ಕೊಳ್ಳುತ್ತಾರೆ. ಯಾವುದೇ ರೀತಿಯಲ್ಲಿ ಹುಡುಕುವ ನಂಬಿಕೆಯಿಂದಿರುವ ವ್ಯಕ್ತಿಗಳು ಅನುಭವಿಸದ ಮತ್ತು ಅವಲಂಭಿಸದ ನಂಬಿಕೆಯು ಎಲ್ಲಾ ಅಗತ್ಯತೆಗಳು ಒಂದಾಗುವದಲ್ಲಿ ಅಗತ್ಯತೆಯುಳ್ಳವರಾಗಿರುವದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳ ತಕ್ಕದ್ದು. ಅವರು ಅವುಗಳನ್ನು ತೆಗೆದು ಹಾಕಿರುವಂತೆ ತೋರ ಬಹುದು. ಮತ್ತು ನಿಶ್ಚಯವಾಗಿಯೂ ಅವರು ನಂಬಿಕೆಯ ಸಮಾಜದೊಳಗೆ ತಮ್ಮ ಬೌದ್ಧಿಕ ಹೋರಾಟದಲ್ಲಿ, ಪ್ರಯೋಗ ಮಾಡುವದರಲ್ಲಿ ಮತ್ತು ಸಮರ್ಪಣೆಯ ಮೊದಲ ಪ್ರಯತ್ನಗಳಲ್ಲಿ ಉಳಿದುಕೊಳ್ಳಲು ಅವರು ನಿಶ್ಚಯವಾಗಿಯೂ ಪ್ರೋತ್ಸಾಹಿಸಲ್ಪಡುವ ಅಗತ್ಯತೆಯುಳ್ಳವರಾಗಿದ್ದಾರೆ.[3]

## ಸ್ವಂತದ್ದಾಗಿಸಿಕೊಂಡ ನಂಬಿಕೆ

ಸ್ವಂತದ್ದಾಗಿಸಿಕೊಂಡ ನಂಬಿಕೆಯು ಕೇವಲ ಅದಾಗಿರುತ್ತದೆ: ಒಬ್ಬನು ಸ್ವಂತದ್ದಾಗಿಸಿಕೊಂಡ ನಂಬಿಕೆಯಾಗಿರುತ್ತದೆ. ಅದು ಒಬ್ಬನ ತಂದೆತಾಯಿಗಳು ಇಲ್ಲವೇ ಒಬ್ಬನ ಸಭೆಯು ನಂಬುವ ಕಾರಣದಿಂದ ಯಾವುದನ್ನಾದರೂ ನಂಬುವದಾಗಿರುವದಿಲ್ಲ; ಆದರೆ ಸ್ವಂತದ್ದಾಗಿಸಿಕೊಂಡ ನಂಬಿಕೆಯು, ಒಬ್ಬನು ಪುರಾವೆಯೊಂದಿಗೆ ಹೋರಾಡಿ ಮತ್ತು ಬಲವಾದ ವೈಯಕ್ತಿಕ ದೃಢ ನಂಬಿಕೆಗಳೊಂದಿಗೆ ಬಂದಿರುವ ಕಾರಣದಿಂದ ನಂಬುವುದಾಗಿದೆ. "ನಾನು ನಂಬುವದನ್ನು" ತಲುಪುವದಕ್ಕೆ ಅವರು ನಂಬುವದನ್ನು ದಾಟಿದ ಒಂದು ಚಳವಳವಾಗಿರುತ್ತದೆ. ಈ ಮಟ್ಟದಲ್ಲಿ ನಂಬಿಕೆಯು ಮೊದಲಿನ ಹಂತಗಳಿಗಿಂತ ಹೆಚ್ಚು ನಿರ್ದಿಷ್ಟವಾದದ್ದೂ, ಹೆಚ್ಚು ಮೋಜನಾಪರವಾದದ್ದೂ, ಹೆಚ್ಚು ಯೋಗ್ಯವಾದದ್ದೂ ಮತ್ತು ಹೆಚ್ಚು ಸುವಾರ್ತಿಕವಾದದ್ದು ಆಗಿರುತ್ತದೆ. ನಮಗಿರುವದಕ್ಕಾಗಿ ದೇವರು ಉದ್ದೇಶಿಸಿದ ನಂಬಿಕೆ ರೀತಿಯಂತೆ ಇದನ್ನು ವೆಸ್ಟರ್ ಹೊಫ್ ವಿವರಿಸಿದ್ದಾರೆ:

> ಸ್ವಂತವಾಗಿಸಿಕೊಂಡಿದ್ದ ನಂಬಿಕೆಯು, ವೈಯಕ್ತಿಕ ಗುರುತಿಸುವಿಕೆಯು, ಪ್ರತಿಯೊಬ್ಬ ವ್ಯಕ್ತಿಗೆ ದೇವರ ಉದ್ದೇಶವಾಗಿದೆ. ಸ್ವಂತದ್ದಾಗಿ ಮಾಡಿಕೊಂಡ ನಂಬಿಕೆಯನ್ನು

ತಲುಪಲಿಕ್ಕೆ (ನಮ್ಮ ಸಂಪೂರ್ಣ ಸಾಮರ್ಥ್ಯವು) ಒಂದು ದೀರ್ಘವಾದ ತೀರ್ಥಯಾತ್ರೆ ಬೇಕಾಗುತ್ತದೆ; ಅದರಲ್ಲಿ ನಮ್ಮ ನಂಬಿಕೆಯ ವಿಸ್ತರಣೆಗೆ ಸಹಾಯಮಾಡುವ ಮಾರ್ಗಗಳಲ್ಲಿ ಕಾರ್ಯಮಾಡಲು ನಮಗೆ ಪ್ರೋತ್ಸಾಹಿಸುವ ವಾತಾವರಣ ಮತ್ತು ಅನುಭವಗಳನ್ನು ಒದಗಿಸುವ ಅಗತ್ಯತೆ ನಮಗಿದೆ.[4]

## ಯೋಹಾನನ ಸುವಾರ್ತೆಯಲ್ಲಿ ನಂಬಿಕೆಯ ಹಂತಗಳು

ಯೋಹಾನ ಸುವಾರ್ತೆಯಲ್ಲಿಯ ನಂಬಿಕೆಯ ಕಥೆಗಳಲ್ಲಿ ಅವುಗಳಲ್ಲಿ ಪ್ರತಿಬಿಂಬಿಸಲ್ಪಟ್ಟ ನಂಬಿಕೆಯ ಹಂತಗಳಿಗಾಗಿ ನೋಡುತ್ತ ಪರೀಕ್ಷಿಸುವುದು ಒಂದು ಸಂಯೋಗಿಸುವ ಅಧ್ಯಯನವಾಗುತ್ತದೆ. ಉದಾಹರಣೆಯಾಗಿ, ನಿಕೊದೇಮನಲ್ಲಿ ಎಷ್ಟು ಹಂತಗಳನ್ನು ನೀವು ನೋಡುವಿರಿ? ಕುರುಡನಾಗಿ ಹುಟ್ಟಿದವನಲ್ಲಿ? ಮರಿಯಳು ಮತ್ತು ಮಾರ್ಥಳಲ್ಲಿ? ಪೇತ್ರ ನಲ್ಲಿ? ಯೋಹಾನನಲ್ಲಿ? ಅಪೊಸ್ತಲ ಯೋಹಾನನು, ಜಾನ್ ವೆಸ್ಟರ್ ಹೊಫ್‌ನಲ್ಲಿ, ಪ್ರೇರಿತ ಲೇಖಕನಾಗಿರುವನು ಎಂಬುದನ್ನು ಜ್ಞಾಪಿಸಿಕೊಳ್ಳುವಾಗ, ಈ ಸುವಾರ್ತೆಯ ಅಂಥ ಓದುವಿಕೆಯು ನಂಬಿಕೆಯು ಬೆಳವಣಿಗೆ ಹೊಂದುವ ವಿವಿಧ ಮಾರ್ಗಗಳನ್ನು ನೋಡುವಲ್ಲಿ ಸಹಾಯಕವಾದವುಗಳಾ ಗಿರುವವು. ಪ್ರತಿಯೊಬ್ಬನ ನಂಬಿಕೆಯು ಅದರ ಸ್ವಂತ ಅದ್ವಿತೀಯ ರೀತಿಯಲ್ಲಿ ಪ್ರಗತಿ ಹೊಂದಿದರೂ, ವೆಸ್ಟರ್ ಹೊಫ್‌ನ ನಂಬಿಕೆಯ ಹಂತಗಳು ನಮ್ಮನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುವವು ಮತ್ತು ನಂಬಿಕೆಯ ಬಗ್ಗೆ ನಮ್ಮ ಮಕ್ಕಳಿಗೆ ನಮ್ಮ ಸ್ನೇಹಿತರಿಗೆ ಮತ್ತು ಇತರರಿಗೆ ಬೋಧಿಸಲು ನಮಗೆ ಸಹಾಯ ಮಾಡುವವು.

---

ಟಿಪ್ಪಣೆಗಳು

[1]John Westerhoff III, *Will Our Children Have Faith?* (San Francisco: Harper & Row Publishers, 1976), 91-99. [2]Ibid., 92. [3]Ibid., 97. [4]Ibid., 99.

# ಯೆಹೂದ್ಯರ ವಾರ್ಷಿಕ ಹಬ್ಬಗಳು

ಸಮೀಪದ ರೋಮನ್ ತಿಂಗಳು

| ಜನ | ಫೆಬ್ರ/ಮಾರ್ಚ್ | ಎಪ್ರೀಲ್ | ಮೇ/ಜೂನ್ | ಜುಲೈ | ಆಗಸ್ಟ್ | ಸೆಪ್ಟಂ/ಅಕ್ಟೊ | ನವಂ | ಡಿಸೆಂಬರ್ |
|---|---|---|---|---|---|---|---|---|
| | (1) ಫೂರಿಮ್ ಹಬ್ಬ [2 ದಿನಗಳು] | (2) ಪಸ್ಕ ಹಬ್ಬ [1 ದಿನ] ಮತ್ತು ಹುಳಿಯಿಲ್ಲದ ರೊಟ್ಟಿಯ ಹಬ್ಬ [1 ವಾರ] | (3) ಪಂಚಾಶತ್ತಮ ಹಬ್ಬ (ವಾರಗಳ ಹಬ್ಬ ಇಲ್ಲವೇ ಪ್ರಥಮ ಫಲಗಳ ಹಬ್ಬ) [1 ದಿನ] | | | (4) ದೇವದರ್ಶನ ಗುಡಾರಗಳ ಹಬ್ಬ (ಇಲ್ಲವೆ ಪರ್ಣಶಾಲೆಗಳ ಇಲ್ಲವೆ ಸುಗ್ಗಿಯ ಹಬ್ಬ) [1 ವಾರ] | | (6) ಪ್ರತಿಷ್ಠೆಯ ಹಬ್ಬ (ಇಲ್ಲವೇ ದೀಪಗಳ ಹಬ್ಬ) [8 ದಿನಗಳು] |
| | | | | | | (5) ತುತೂರಿಗಳ ಹಬ್ಬ [1 ದಿನ] | | |

ಪ್ರತಿಯೊಂದು ಯಾವುದ ಸ್ಮರಣಾರ್ಥವಾಗಿತ್ತು: (1) ರಾಣಿ ಎಸ್ತೇರಳು ಯೆಹೂದ್ಯರನ್ನು ಕಾಪಾಡಿದ್ದನು; (2) ಮರಣವು ದಾಟಿ ಹೋದದ್ದು ಮತ್ತು ಐಗುಪ್ತದಿಂದ ಇಸ್ರಾಯೇಲ್ಯರ ಹೊರಡೋಣವು; (3) ಸಿನಾಯಿ ಬೆಟ್ಟದ ಬಳಿಯಲ್ಲಿ ತೋರೆಗೆ ಧರ್ಮಶಾಸ್ತ್ರವು ಕೊಡಲ್ಪಟ್ಟಿದ್ದು; (4) ಅರಣ್ಯದಲ್ಲಿ ಜೀವನ; (5) ನೂತನ ವರ್ಷದ ದಿನ; (6) ದೇವಾಲಯವನ್ನು ಅನ್ಯರಿಂದ ಪುನಃ ವಶಪಡಿಸಿಕೊಂಡ ನಂತರ ಅದನ್ನು ಪುನಃ ಪ್ರತಿಷ್ಠಾಪಿಸಿದ್ದು.

ಇವುಗಳಲ್ಲಿ ಮೂರು ಹಬ್ಬಗಳು - ಪಸ್ಕ ಹಬ್ಬ, ಪರ್ಣಶಾಲೆಗಳ ಹಬ್ಬ ಮತ್ತು ಪ್ರತಿಷ್ಠೆಯ ಹಬ್ಬ - ಯೋಹಾನನ ಸುವಾರ್ತೆಯಲ್ಲಿ ಕಂಡು ಬರುತ್ತವೆ.

# “ನಾನು ಹೇಗೆ ಕ್ರಿಸ್ತನ ಸಭೆಯ ಸದಸ್ಯನಾಗ ಬಹುದು?”

ಕ್ರೈಸ್ತರು ಇಲ್ಲವೇ ಕ್ರಿಸ್ತನ ಸಭೆಯ ಸದಸ್ಯರು ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟ ಜನರಾಗಿದ್ದಾರೆ. ಆದುದರಿಂದ, ಸಭೆಯು, ಪಾಪಿಗಳಿಂದ - ಒಂದು ಸಲ ತಮ್ಮ ಪಾಪಗಳಲ್ಲಿ ತಪ್ಪಿ ಹೋದವರಿಂದ - ದೇವರ ಕೃಪೆಯಿಂದ ತುಂಬಿಸಲ್ಪಡದರಿಂದ ಆಗಿರುತ್ತದೆ. ಸಭೆಯ ಶಿಶುಗಳಿಗಾಗಿ ರೂಪಿಸಲ್ಪಡಲಿಲ್ಲ, ಶಿಶುಗಳು “ಸುರಕ್ಷಿತ”ವಾಗಿರುತ್ತವೆ; ಅವು ರಕ್ಷಿಸಲ್ಪಡುವ ಅವಶ್ಯಕತೆಯಿರುವದಿಲ್ಲ (ಮತ್ತಾಯ 18:3). ಪಾಪವು ದೇವರಿಗೆ ವಿರುದ್ಧವಾದ ದಂಗೆಯಾಗಿರುತ್ತದೆಂದು ಗುರುತಿಸುವಷ್ಟು ನಾವು ದೊಡ್ಡವರಾಗುತ್ತೇವೆ; ಆಗ ನಾವು ಪಾಪ ಮಾಡುತ್ತೇವೆ. ನಾವೆಲ್ಲರೂ ಪಾಪ ಮಾಡಿದ್ದರಿಂದ (ರೋಮಾಪುರ 3:23), ನಮ್ಮೆಲ್ಲರಿಗೂ ರಕ್ಷಣೆಯ ಅಗತ್ಯತೆ ಇರುತ್ತದೆ.

ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಲು ಯೇಸುವು ಮರಣ ಹೊಂದಿದವನು (1 ಕೊರಿಂಥ 15:3). ಕೃಪೆಯ ಆತನ ವರವನ್ನು ನಮ್ಮದಾಗಿಸಿಕೊಳ್ಳಲು ನಾವು ಏನು ಮಾಡತಕ್ಕದ್ದು?

ಮೊದಲನೆಯದು, *ನಾವು ಕ್ರಿಸ್ತನ ಬಗ್ಗೆ ಕಲಿತುಕೊಳ್ಳವ,* ಮಹಿಮೆಯುಳ್ಳ ಸುವಾರ್ತೆಯ ಸತ್ಯವನ್ನು ಕಲಿಸಲ್ಪಡುವ ಅಗತ್ಯತೆ ಇದೆ (ಮತ್ತಾಯ 28:18-20; ಯೋಹಾನ 6:45). ಇದು ನಮಗೆ ನಂಬಿಕೆ ಇರುವುದಕ್ಕೆ (ರೋಮಾಪುರ 10:17), *ಯೇಸುವು ದೇವರ ಕುಮಾರನಾಗಿದ್ದಾನೆ* ಎಂದು ಇತರರ ಮುಂದೆ ಅರಿಕೆ ಮಾಡಲು ನಮಗೆ ಕಾರಣವಾಗುವ ಕ್ರಿಸ್ತನಲ್ಲಿ ನಂಬಿಕೆಯ ನಮೂನೆ ಕಾರಣವಾಗುತ್ತದೆ (ರೋಮಾಪುರ 10:9, 10). *ನಮ್ಮ ನಂಬಿಕೆಯು ನಮ್ಮ ಪಾಪಗಳ ಅರಿಕೆಗೆ ನಡಿಸತಕ್ಕದ್ದು* (ಅಪೊಸ್ತಲರ ಕೃತ್ಯಗಳು 2:37, 38) ಅಂದರೆ, ನಮ್ಮ ಪಾಪಗಳ ಕಡೆಗೆ ಮನೋಭಾವನೆಯ ಬದಲಾವಣೆಯಾಗಬೇಕು (2 ಕೊರಿಂಥ 7:10). ಅಂತಿಮವಾಗಿ, ನಮ್ಮ ನಂಬಿಕೆಯು ಬಾಪ್ತಿಸ್ಮ ಹೊಂದಲಿಕ್ಕೆ ನಮ್ಮನ್ನು ನಡಿಸಬೇಕು (ಮಾರ್ಕ 16:16). ಬಾಪ್ತಿಸ್ಮವು ಪಾಪಗಳ ಕ್ಷಮಾಪಣೆಗಾಗಿ ನೀರಿನಲ್ಲಿ (ಅಪೊಸ್ತಲರ ಕೃತ್ಯಗಳು 10:47) ಹೂಣಿಡುವಿಕೆಯಾಗಿದೆ (ರೋಮಾಪುರ 6:3, 4).

ಸಭೆಯ ಸ್ಥಾಪನೆಯಾದ ದಿನದಂದು, 3,000 ಜನರು ಈ ಯೋಜನೆಯನ್ನು ಅನುಸರಿಸಿದರು. ಅನಂತರ ಇತರರು ಕರ್ತನಿಂದ ಆತನ ಸಭೆಗೆ ಕೂಡಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:38, 41, 47). ಅವರು ಕ್ರೈಸ್ತರಾದ ಸಮಯದಿಂದ ಅವರ ಜೀವಿತಗಳು ಭಿನ್ನವಾದವುಗಳು: “ಇವರು ಅಪೊಸ್ತಲರ ಬೋಧನೆಯನ್ನು ಕೇಳುವ ದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು” (ಅಪೊಸ್ತಲರ ಕೃತ್ಯಗಳು 2:42).

1 ಕೊರಿಂಥ 12:13ರಲ್ಲಿ ಪೌಲನು, ಪರಿಶುದ್ಧಾತ್ಮನ ಬೋಧನೆಗಳಿಂದ ನಡಿಸಲ್ಪಟ್ಟವರು “ಒಂದೇ ದೇಹದೊಳಗೆ ಬಾಪ್ತಿಸ್ಮ ಹೊಂದಿದರು” ಎಂದು ಒತ್ತಿ ಹೇಳಿದ್ದಾನೆ. ಅದು ಸಭೆಯಾಗಿರುತ್ತದೆ (ಕೊಲೊಸ್ಸೆ 1:13). ಸಭೆಯು ರಕ್ಷಿಸಲ್ಪಟ್ಟವರ ದೇಹವಾಗಿರುವದರಿಂದ, ನಮ್ಮನ್ನು ಸಭೆಯನ್ನಾಗಿ ಮಾಡುವಂಥದ್ದು ಸಹ ನಮ್ಮನ್ನು ರಕ್ಷಿಸುತ್ತದೆ, ಮತ್ತು ನಮ್ಮನ್ನು ರಕ್ಷಿಸುವಂತದ್ದು ಸಹ ನಮ್ಮನ್ನು ಸಭೆಯ ಸದಸ್ಯನ್ನಾಗಿ ಮಾಡುತ್ತದೆ.

ಕ್ರೈಸ್ತರ ಉದಾರತೆಯ ಮೂಲಕವಾಗಿ ಟ್ರೂತ್ ಫಾರ್ ಟುಡೇ ಜಾಗತಿಕ ಮಿಶನ ಶಾಲೆಯು ಉಚಿತವಾಗಿ ಸತ್ಯವೇದದ ಅಧ್ಯಯನ ಸಾಹಿತ್ಯಗಳನ್ನು ಒದಗಿಸಲು ಶಕ್ತರಾಗಿದ್ದೇವೆ. ಅಂಚೆ ವಿಳಾಸಗಳ ಯಾದಿಯನ್ನು ಚಲಾವಣೆಯಲ್ಲಿ ಇಡುವದಕ್ಕಾಗಿ ಈ ಕೆಳಗಿನ ಮಾಹಿತಿಯನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ನಿಮ್ಮ ಮಾಹಿತಿಯು ಇನ್ನೂ ಸರಿಯಾಗಿದೆ ಎಂಬುದನ್ನು ದೃಢಪಡಿಸುವದಕ್ಕಾಗಿ ವರ್ಷದಲ್ಲಿ ಒಂದು ಸಲವಾದರೂ ದಯವಿಟ್ಟು ನಮಗೆ ಬರೆಯಿರಿ ಹಾಗೂ ನಿಮ್ಮ ಅಧ್ಯಯನದಲ್ಲಿ ಈ ಸಾಹಿತ್ಯವು ನಿಮಗೆ ಸಹಾಯಕವಾಗಿರುವದನ್ನು ಕಂಡುಕೊಂಡರೆ ಅದನ್ನು ನಮಗೆ ಬರೆದು ತಿಳಿಸಿರಿ. ದೇವರು ನಿಮ್ಮ ಕೆಲಸದಲ್ಲಿ ನಿಮ್ಮನ್ನು ಆಶೀರ್ವದಿಸಲಿ.

ಒಂದನ್ನು ಗುರುತಿಸಿರಿ: ❑ ಪುರುಷ ❑ ಮಹಿಳೆ

ಹೆಸರು: ______________________________

ಸಂಪೂರ್ಣ ವಿಳಾಸ: ______________________________

______________________________

______________________________

______________________________

ಹಳೇ ವಿಳಾಸ (ವಿಳಾಸ ಬದಲಿಯಿಸಬೇಕಾದಲ್ಲಿ): ______________________________

______________________________

______________________________

______________________________

ಈಮೈಲ್ ಅಡ್ರೆಸ್: ______________________________

ಯಾವ ಸಭೆಯಲ್ಲಿ ಭಾಗವಹಿಸುತ್ತೀರಿ: ______________________________

ಅದು ಯಾವ ಸ್ಥಳ: ______________________________

ಪ್ರಸಂಗಿಯ ಹೆಸರು: ______________________________

ನೀವು ಭಾಗವಹಿಸುತ್ತಿರುವ ಸಭೆಯಲ್ಲಿ ನಿಮ್ಮ ಪಾತ್ರವೇನು? (ನಿಮಗೆ ಅನ್ವಯಿಸುವದೆಲ್ಲವನ್ನೂ ಗುರುತಿಸಿರಿ):

❑ ಪ್ರಸಂಗಿ ❑ ಸದಸ್ಯ
❑ ಬೈಬಲ್ ಕ್ಲಾಸ್ ಟೀಚರ್ ❑ ಸದಸ್ಯನಲ್ಲ

ಟ್ರೂತ್ ಫಾರ್ ಟುಡೇ ಜಾಗತಿಕ ಮಿಶನ್ ಶಾಲೆಯ ಪ್ರಕಟಣೆಗಳನ್ನು ಕ್ರಮವಾಗಿ ಸ್ವೀಕರಿಸುತ್ತಿರುವಿರೊ? (ಒಂದನ್ನು ಗುರುತಿಸಿರಿ):

❑ ಇಲ್ಲ.
❑ ಹೌದು. ನೇರವಾಗಿ ನನಗೆ ಕಳುಹಿಸಲ್ಪಡುತ್ತದೆ.
❑ ಹೌದು. ಇವರಿಂದ ವಿತರಿಸಲ್ಪಡುತ್ತದೆ.

ಯಾವ ಭಾಷೆಯಲ್ಲಿ ಸ್ವೀಕರಿಸಲು ಬಯಸುವಿರಿ? (ಒಂದನ್ನು ಗುರುತಿಸಿರಿ.)

❑ ಇಂಗ್ಲೀಷ್ ❑ ಹಿಂದಿ ❑ ಕನ್ನಡ ❑ ಮಲಯಾಳಂ ❑ ತಮಿಳು ❑ ತೆಲುಗು

ನೀವು ಸ್ವೀಕರಿಸುವ ಸಾಹಿತ್ಯವನ್ನು ಹೇಗೆ ಉಪಯೋಗಿಸುವಿರಿ? ______________________

__________________________________________________________________

__________________________________________________________________

ಈ ಸಾಹಿತ್ಯಗಳನ್ನು ಕ್ರಮಪ್ರಕಾರವಾಗಿ ಸ್ವೀಕರಿಸಲು ಬಯಸುವವರ ಬಗ್ಗೆ ನಿಮಗೆ ತಿಳಿದಿದ್ದರೆ, ಈ ಮೇಲಿನದನ್ನು ದ್ವಿಪ್ರತಿ ಮಾಡಿ ಅವರಿಗೆ ಕೊಡಿರಿ. ಇದನ್ನು ಈ ವಿಳಾಸಕ್ಕೆ ಕಳುಹಿಸಿರಿ:

ಟ್ರೂತ್ ಫಾರ್ ಟುಡೇ,
ಪೋಸ್ಟ್ ಬ್ಯಾಗ್ ನಂಬರ್ 5311,
ಶಿವಾಜಿನಗರ,
ಬೆಂಗಳೂರು - 560 001